ಇದೆಲ್ಲ ವಿಮರ್ಶೆಗೆ ಅಷ್ಟು ಒಳ್ಳೆಯದಲ್ಲ.

◆ **ಒಬ್ಬ ಓದುಗರಾಗಿ, ವಿಮರ್ಶಕರಾಗಿ ನೀವು ಸಾಹಿತ್ಯವನ್ನು ಯಾವ ಕಾರಣಕ್ಕಾಗಿ ವಿಮರ್ಶಿಸುತ್ತೀರಿ? ಅಂದ್ರೆ ನಿಮ್ಮ 'ದಿ ಐಡಿಯಾ ಆಫ್ ಕ್ರಿಟಿಸಿಸಂ' ಏನು? ನಿಮ್ಮ ಸೈದ್ಧಾಂತಿಕ ನೆಲೆಗಳು ಯಾವುವು?**

ಯಾವುದನ್ನು ಸಾಹಿತ್ಯವೆಂದು ಕರೆಯುತ್ತೇವೆಯೊ ಅದು ಪ್ರತಿ ಕಾಲಕ್ಕೂ ನಿರ್ಧಾರಗೊಳ್ಳುತ್ತಿರುತ್ತದೆ. ಇವಾಗ ಯಾವುದನ್ನು ಸಾಹಿತ್ಯವೆಂದು ಕರೆಯುತ್ತಿದ್ದೇವೆಯೊ ಅದು 19ನೇ ಶತಮಾನದಲ್ಲಿ ರೂಪುಗೊಂಡದ್ದು. ಹಾಗೆಯೇ ವಿಮರ್ಶೆ ಕೂಡ. ಕೆಲವು ಸಲ ನಾವೆಲ್ಲ ಬಹಳ ತೀವ್ರವಾಗಿ ಅನುಕರಿಸಲು ಉತ್ಸುಕರಾಗಿರುತ್ತೇವೆ. ಯುರೋಪಿನಲ್ಲಿ ಏನೇ ಹೊಸದು ಬಂದರೂ ಅದು ಬಹುಬೇಗ ನಮ್ಮ ಆಸಕ್ತಿಗೆ ಕಾರಣವಾಗುತ್ತದೆ. ಇಪ್ಪತ್ತೊಂದನೇ ಶತಮಾನದ ಆರಂಭದಲ್ಲೇ ಹಲವು ವಿಮರ್ಶಾ ಪಂಥಗಳು ಬಂದವು. ಟರ್ರಿ ಈಗಲ್‌ಟನ್ ಅವರ ಒಂದೆರಡು ಕೃತಿಗಳು ಸಾಹಿತ್ಯಾಸಕ್ತರಲ್ಲಿ ಜನಪ್ರಿಯವಾದವು. 'ಹೌ ಟು ರೀಡ್ ಪೊಯೆಟ್ರಿ' ಮೊದಲು ಬರೆದರು. ಆದರೆ ಇದು ಅವರಿಗೆ ಸಮಾಧಾನ ಉಂಟುಮಾಡಲಿಲ್ಲ. ನಂತರದಲ್ಲಿ 'ಹೌ ಟು ರೀಡ್ ಲಿಟರೇಚರ್' ಬರೆದರು. ಇದನ್ನು ಇನ್ನಷ್ಟು ವ್ಯಾಪಕವಾಗಿ ಪರಿಶೀಲಿಸಿದರು. ಸಾಹಿತ್ಯವನ್ನು ಓದುವಂತೆ ಯಾವ ಒತ್ತಡವೂ ಇರುವುದಿಲ್ಲ. ಆದರೂ ಸಾಹಿತ್ಯವನ್ನು ಓದುತ್ತೇವೆ ಯಾಕೆ? ಯಾವುದೇ ಕಾಲದಲ್ಲಾದರೂ ಸರಿ ಜನ ಸಾಹಿತ್ಯವನ್ನು ಒಂದಲ್ಲ ಒಂದು ರೀತಿ ಓದುತ್ತ ಬಂದಿದ್ದಾರೆ. ಬಹುಶಃ ಸಾಹಿತ್ಯ ಬರೆಯುವುದು ಮತ್ತು ಓದುವುದು ಅವರಿಗೆ ಒಂದು ಬಗೆಯ ಸಂತೃಪ್ತಿ, ಸಂತೋಷ ಉಂಟುಮಾಡುತ್ತದೇನೊ. ಸಾಹಿತ್ಯವನ್ನು ಯಾಕೆ ಓದಿಸಬೇಕು? ಸಾಹಿತ್ಯವನ್ನು ಓದಿಸುವುದೆಂದರೆ ಶಾಸ್ತ್ರೀಯ ಸಂಗೀತವನ್ನು ಕಲಿಸಿದಂತೆ. ಶಾಸ್ತ್ರೀಯ ಸಂಗೀತದ ಕುರಿತು ಅಭಿರುಚಿ ಹುಟ್ಟಿಸುವಂತೆ. ವಿಜ್ಞಾನದಲ್ಲೂ ಈಗ ಶುದ್ಧ ವಿಜ್ಞಾನವನ್ನು ಓದಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಬಹುತೇಕರಿಗೆ ತಂತ್ರಜ್ಞಾನದ ಕಡೆ ಆಸಕ್ತಿ. ಸಾಹಿತ್ಯ ಕಲಿಸುವವರ ಸಂಖ್ಯೆ ಕಡಿಮೆಯಾಗಿದೆ ಅಂದರೆ ಇದರರ್ಥ ಸಾಹಿತ್ಯ ನಿರುಪಯೋಗಿ ಅಂತ ಅಲ್ಲ. ಸಾಹಿತ್ಯದ ಸಾಮರ್ಥ್ಯ ಎಂದೂ ಕಡಿಮೆಯಾಗುವುದಿಲ್ಲ. ಎಲ್ಲಿಯವರೆಗೆ ಬೇರೆ ಬೇರೆ ಜ್ಞಾನಶಿಸ್ತುಗಳಲ್ಲಿ ಸಿಗಲಾರದದಂಥದ್ದು ಸಾಹಿತ್ಯದಲ್ಲಿ ಸಿಗುತ್ತದೊ ಅಲ್ಲಿಯವರೆಗೆ ಸಾಹಿತ್ಯವನ್ನು ಓದುವವರ ಸಂಖ್ಯೆ ಇದ್ದೇ ಇರುತ್ತದೆ. ಅಲ್ಲಿ ಸಿಗುವಂಥದ್ದು ಬೇರೆಲ್ಲೂ ಸಿಗುವುದಿಲ್ಲವೆಂದಾದಾಗ ಮಾತ್ರ ಸಾಹಿತ್ಯದ ಸಾಮರ್ಥ್ಯ ಎಂದೂ ಕುಂದುವುದಿಲ್ಲ. ಇದರರ್ಥ ಬೇರೆ ಜ್ಞಾನ ಶಿಸ್ತುಗಳ ಜೊತೆ ಸಾಹಿತ್ಯಕ್ಕೆ ಸಂಬಂಧವಿಲ್ಲವೆಂತಲ್ಲ. ಆದರೆ ಸಾಹಿತ್ಯ ಅನೇಕ ಅರ್ಥಗಳಲ್ಲಿ ಬೇರೆ ಜ್ಞಾನ ಶಿಸ್ತುಗಳಲ್ಲಿ ಸಿಗುವಂಥದ್ದನ್ನು ಪುನರ್ ಮಂಡಿಸುವುದಿಲ್ಲ. ಹಾಗೆನಾದರೂ ಆಗಿದ್ದರೆ ಸಾಹಿತ್ಯ ಎಂದೋ ಅರ್ಥ ಕಳೆದುಕೊಳ್ಳುತ್ತಿತ್ತು. ಸಾಹಿತ್ಯದಲ್ಲಿ ವೈಚಾರಿಕತೆ ಬಹಳ ಮುಖ್ಯ. ಆದರೆ ಇದೇ ಅಂತಿಮವಲ್ಲ. ಅಲ್ಲಿ ಇನ್ನೂ ಮುಖ್ಯವಾದದ್ದು ಅನುಭೂತಿ. ಸಾಹಿತ್ಯದಲ್ಲಿ ಸಾಮಾನ್ಯವಾಗಿ ಸಿಗುವ ಅನುಭೂತಿ ಬೇರೆ ಶಾಸ್ತ್ರಗಳಲ್ಲಿ ಸಿಗುವುದಿಲ್ಲ. ಇತರ ಕಲೆಗಳ ಬಗ್ಗೆ ಕೂಡ ಇದು ನಿಜ. ಇದೆಲ್ಲ ಸಂಗತಿಯೂ ನನ್ನನ್ನು ಸಾಹಿತ್ಯದ ಓದಿನ ಕಡೆಗೆ ಎಳೆದಿದೆ. ನೋಡಿ, ಕೆಲವೊಂದು ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸುವುದು ಕಷ್ಟ. ಆದರೆ ನಿಮ್ಮ ಇತರ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳಲ್ಲೂ ನಾನು ಯಾಕಾಗಿ ಓದುತ್ತೇನೆ, ವಿಮರ್ಶಿಸುತ್ತೇನೆ ಎಂಬುದಕ್ಕೆ ಕೆಲ ಕಾರಣಗಳಿವೆ ಎಂದುಕೊಂಡಿರುವೆ.

> ‘ ಸಾಹಿತ್ಯದ ಅನನ್ಯತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲೇಬೇಕಾಗಿದೆ. ಇಲ್ಲವಾದರೆ ಸಾಹಿತ್ಯ ಕುರಿತ ಅಜ್ಞಾನವೇ ತುಂಬಿ ತುಳುಕುತ್ತದೆ. ಸಾಹಿತ್ಯವನ್ನು ಅದರ ತಿಳಿವಳಿಕೆಯನ್ನು ಅದರದೇ ರೀತಿಯಲ್ಲಿ ಬೆಳೆಯಲು ಬಿಡಬೇಕು. ಅದು ತನ್ನದೇ ರೀತಿಯಲ್ಲಿ ಓದುಗರನ್ನು, ಸೂಕ್ಷ್ಮಜ್ಞರನ್ನು ಸೆಳೆಯುವಂತಿರಬೇಕು. ಅದು ತನ್ನೊಳಗಿನಿಂದಲೇ ತನ್ನ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು.